**<u>ವಿಧಾನ ಪರಿಷತ್ ಸದಸ್ಯರಾದ ಶ್ರೀ ಎನ್.ರವಿಕುಮಾರ್ ಹಾಗೂ ಶ್ರೀ ಕೋಟ ಶ್ರೀನಿವಾಸ ಪೂಜಾರಿ ರವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ</u>**

**ಪ್ರಶ್ನೆ:** **ರಾಯಚೂರು ಜಿಲ್ಲೆಯ ಸಿಂಧೂನೂರಿನಲ್ಲಿ ದಿನಾಂಕ:16.07.2023ರಂದು ಧಾರ್ಮಿಕ ವಿಚಾರಕ್ಕೆ ಸಂಬಂಧಿಸಿದಂತೆ ಮುಸ್ಲಿಂ ಯುವಕರು ತಾಲ್ಲೂಕಿನ ಬೆಂಗಾಲಿ ಕ್ಯಾಂಪ್-2ರಲ್ಲಿ ಮಾರಕಾಸ್ತ್ರಗಳಿಂದ ದಾಂಧಲೆ ನಡೆಸಿರುವ ಬಗ್ಗೆ ಹಾಗೂ ದುರ್ಗಾದೇವಿ ದೇವಸ್ಥಾನದ ಮುಂದೆ ನಮಾಜ್ ಮಾಡಿ ಧಾರ್ಮಿಕ ಘೋಷಣೆಗಳನ್ನು ಕೂಗಿ ಮಹಿಳೆಯರು, ಮಕ್ಕಳು ಎನ್ನವುದನ್ನು ಲೆಕ್ಕಿಸದೆ ಸಿಕ್ಕ ಸಿಕ್ಕವರ ಮೇಲೆ ಹಲ್ಲೆ ನಡೆಸಿರುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲು ಹಾಗೂ ಈ ದುರ್ಘಟನೆ ಕುರಿತು.**

**ಉತ್ತರ:** ಆರ್.ಹೆಚ್.ಕ್ಯಾಂಪ್ ನಂ.02 ನಿವಾಸಿಯಾದ ಸುಭೋಜಿತ್ ಮಂಡಲ್ ತಂದೆ ಸುಬ್ರತೋ ಮಂಡಲ್ ಈತನು Instagram ಎಂಬ ಸಾಮಾಜಿಕ ಜಾಲತಾಣದಲ್ಲಿ ದಿನಾಂಕ:09.07.2023 ರಂದು "alone girl" ಎಂಬ ಗ್ರೂಪ್ ರಚಿಸಿದ್ದು, ಈ ಗ್ರೂಪಿನಲ್ಲಿ ಅರ್ಜುನ್ ಮಂಡಲ್ ತಂದೆ ಮಾಧವ್ ಮಂಡಲ್, 19 ವರ್ಷ, ನಮಶೂದ್ರ, ಸಾ:ಆರ್.ಹೆಚ್.ಕ್ಯಾಂಪ್ ನಂ:02 ಈತನು ಗ್ರೂಪ್ ಅಡ್ಮಿನ್ ಇರುತ್ತಾನೆ. ಈ ಗ್ರೂಪ್‌ನಲ್ಲಿ ಆರ್.ಹೆಚ್.ಕ್ಯಾಂಪ್ ನಂ: 1 ರಿಂದ 5, ಸಿಂಧನೂರು ರವರು ಸುಮಾರು 30 ಜನ ಸದಸ್ಯರನ್ನು ಸೇರ್ಪಡೆ ಮಾಡಿದ್ದು, ಹೆಚ್ಚಾಗಿ ಆರ್ ಹೆಚ್ ಕ್ಯಾಂಪ್ ನಂ:02 ರಲ್ಲಿನ ಹುಡುಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಇವರ ಪೈಕಿ 4-5 ಜನ ಮುಸ್ಲಿಂ ಜನಾಂಗದ ಹುಡುಗರಿದ್ದು, ತೌಶೀಫ್ ಬೆಂಗಳೂರು ಇವನು ಸಹ ಇದ್ದು, 4-5 ಜನ ಹುಡುಗಿಯರ ಪೈಕಿ ತೋನಿಷಾ, ಶಿವಾಂಗಿ ಅಂತಾ ಈ 2 ಜನ ಹುಡುಗಿಯರು ಸಹ ಇರುತ್ತಾರೆ. ಅರ್ಜುನ್ ಮಂಡಲ್ ಎನ್ನುವವನು ಪ್ರಿಯಾ ಎನ್ನುವ ಹೆಸರಿನಲ್ಲಿ ಫೇಕ್ ಐಡಿ ರಚಿಸಿದ್ದು, ಇದೇ ಐಡಿಯಲ್ಲಿ ಚಾಟ್ ಮಾಡುತ್ತಾ ಇರುತ್ತಾನೆ. ಈ ಮಧ್ಯದಲ್ಲಿ ಸುಭೋಜಿತ್ ಮಂಡಲ್ ಈತನು ಗ್ರೂಪಿನಿಂದ ಹೊರಬಂದಿರುತ್ತಾನೆ ಎಂದು ತಿಳಿದುಬಂದಿರುತ್ತದೆ.

ದಿನಾಂಕ:11.07.2023 ರಂದು Instagram ನ **"alone girl"** ಎಂಬ ಗ್ರೂಪ್‌ನಲ್ಲಿ ತೌಶೀಫ್ ಎನ್ನುವಾತನು insta Queen ಎನ್ನುವ ಐಡಿಯಿಂದ ಪದೇ ಪದೇ 4-5 ಸಲ ಗ್ರೂಪ್ ಆಡಿಯೋ ಕಾಲ್ ಮಾಡಿದ್ದರಿಂದ ಗ್ರೂಪಿನ ಸದಸ್ಯರಿಗೆ ಕಿರಿಕಿರಿಯಾಗಿ ಸದಸ್ಯರ ಪೈಕಿ ಅಪೂರ್ವ ಮಂಡಲ್, ಅರ್ಜುನ್ ಮಂಡಲ್ ಎನ್ನುವವರು ಪರಸ್ಪರ ಒಬ್ಬರಿಗೊಬ್ಬರು ಕೆಟ್ಟ ಪದಗಳಲ್ಲಿ ಮೆಸೇಜ್ ಮಾಡುತ್ತಾ ಹೋಗುತ್ತಾರೆ. ಕೊನೆಗೆ ಗ್ರೂಪ್ ಕ್ರಿಯೇಟ್ ಮಾಡಿದ ಸುಭೋಜಿತ್ ಮಂಡಲ್ ಈತನ ಮೋಬೈಲ್ ನಂಬರಿಗೆ ಕರೆ ಮಾಡಿ ಪ್ರಿಯಾ ಯಾರು ಮುಸ್ಲಿಂ ಧರ್ಮದ ದೇವರಿಗೆ ಅವಮಾನ ಮಾಡಿರುತ್ತಾರೆ ಎಂದು ತೌಶೀಫ್ ಕೇಳುತ್ತಾರೆ. ಆಗ ಸುಭೋಜಿತ್ ಮಂಡಲ್ ಈತನು ನನಗೆ ಪ್ರಿಯಾ ಯಾರು ಅನ್ನುವದು ಗೊತ್ತಿರುವದಿಲ್ಲವೆಂದು ಹೇಳಿದಾಗ ಅರ್ಜುನ್ ಮಂಡಲ್ ಗ್ರೂಪ್ ಅಡ್ಮಿನ್ ಈತನಿಗೆ ಇನ್‌ಸ್ಟಾಗ್ರಾಂ ಕಾಲ್ ಮಾಡಿ ಪ್ರಿಯಾ ಎಂಬ ಹೆಸರಿನವರು ಯಾರು, ಅವರ ನಂಬರ್ ಕೊಡು ಅಂತಾ ಕೇಳಿದ್ದು, ಅವನು ಸಹ ಗೊತ್ತಿಲ್ಲವೆಂದು ಹೇಳಿದಾಗ ತೌಶೀಫ್ ಈತನು ನಿಮ್ಮ ಕ್ಯಾಂಪಿಗೆ ಬಂದು ಎತ್ತಿಹಾಕಿಕೊಂಡು ಹೋಗುತ್ತೇವೆ ಎಂದು ಧಮಕಿ ಹಾಕುತ್ತಾನೆ. ನಂತರ ದಿನಾಂಕ:16.07.2023 ರಂದು ಸಂಜೆ 6.00 ಗಂಟೆಗೆ 1) ಅಕ್ಬರ್ ತಂದೆ ಆಶೀಮಸಾಬ್, 2) ಶ್ಯಾಮೀದ್ ತಂದೆ ಲಾಲ್ ಸಾಬ, 3) ತಾಜುದ್ದೀನ್ ತಂದೆ ಹುಸೇನಭಾಷ, 4) ಸಮೀರ್ ತಂದೆ ಶೇಖ್ ಮೋಹಿನುದ್ದೀನ್ 5) ತೌಸೀಫ್ ಹಾಗೂ ಸುಮಾರು 30-35 ಜನರು ಸೇರಿ ಮೋಟಾರ ಸೈಕಲ್‌ಗಳ ಮೇಲೆ ಆರ್.ಹೆಚ್.ನಂ.02 ಕ್ಯಾಂಪಿಗೆ ಬಂದು ದುರ್ಗಾಮಾತಾ ಗುಡಿ ಹತ್ತಿರ ಜನರ ಹತ್ತಿರ ಅವರ ಮನೆಗಳನ್ನು ವಿಚಾರಿಸುತ್ತಿದ್ದಾಗ, ಅಲ್ಲಿಗೆ ಬಂದ ಸುಭೋಜಿತ್ ಮಂಡಲ್‌ಗೆ ನೋಡಿ ಅವಾಚ್ಯ ಸಬ್ಧಗಳಿಂದ 'ನೀನು ಸಹ ಇನ್‌ಸ್ಟಾಗ್ರಾಂ ಗ್ರೂಪ್‌ನಲ್ಲಿದ್ದು, ಹುಡುಗಿಯರ ಮನೆ ಕೇಳಿದರೇ ನನಗೆ ಗೊತ್ತಿಲ್ಲವೆಂದು ಹೇಳುತ್ತಿಯಾ' ಎಂದು ಏಕಾಏಕಿ ಆತನಿಗೆ ಕೈಗಳಿಂದ ಮೈಕೈಗೆ ಮತ್ತು ಮುಖಕ್ಕೆ ಗುದ್ದಿ ನೆಲಕ್ಕೆ ಕೆಡವಿ ರಸ್ತೆಯಲ್ಲಿ ಎಳೆದಾಡಿ ಕಟ್ಟಿಗೆಯಿಂದ ಹೊಡೆದಿದ್ದು, ಬಿಡಿಸಲು ಹೋದ ಪಿರ್ಯಾದಿಗೆ ಮತ್ತು ಸುಬ್ರತೋ ಮಂಡಲ್‌ಗೆ ಕೈಗಳಿಂದ ಮುಖಕ್ಕೆ, ಮೈಕೈಗೆ ಹೊಡೆಬಡೆ ಮಾಡಿದ್ದು, ಆರೋಪಿ ನಂ.03 ಈತನು ಚಿಕ್ಕ ಚಾಕುವನ್ನು ತೆಗೆದು ಈ .....ಮಗನಿಗೆ ಚಾಕು ಹಾಕಿದರೆ, ಅವನು ಆ ಹುಡುಗಿಯರ ಮನೆಯನ್ನು ಹೇಳುತ್ತಾನೆ ಎಂದು ಚಾಕುವಿನಿಂದ

ಸುಭೋಜಿತ್ ಮಂಡಲ್‌ನಿಗೆ ತಿವಿಯಲು ಯತ್ನಿಸಿ, ತಾನೀಶಾ ಮಂಡಲ್ ಎನ್ನುವವರ ಮನೆಗೆ ಹೋಗುತ್ತೇವೆ ವಾಪಸ್ಸು ಬಂದು ನಿಮಗೆ ಒಂದು ಗತಿ ಕಾಣಿಸುತ್ತೇವೆ ಎಂದು ಅಶ್ಲೀಲ ಶಬ್ಧಗಳಿಂದ ನಿಂದಿಸಿ ಅಲ್ಲಿಂದ ತಾನೀಶಾ ಮಂಡಲ್ ರವರ ಮನೆಗೆ ಹೋಗಿ ಮನೆಯಲ್ಲಿ ಅತಿಕ್ರಮ ಪ್ರವೇಶ ಮಾಡಿ, ಮನೆಯಲ್ಲಿದ್ದ ಆಕೆಯ ತಾಯಿಯಾದ ಮೀನಾಕ್ಷಿ ಮಂಡಲ್ ಇವಳ ಕೂದಲು ಹಿಡಿದು ಎಳೆದುಕೊಂಡು ಬಂದು "..... ನಿನ್ನ ಮಗಳು ತಾನೀಶಾಳಿಗೆ ಎಷ್ಟು ಸೊಕ್ಕು ನಮ್ಮ ಬಗ್ಗೆ ಕೆಟ್ಟದಾಗಿ ಚಾಟ್ ಮಾಡುತ್ತಾಳ" ಎಂದು ಹೇಳಿ ಕೈಗಳಿಂದ ಅವಳ ಕಪಾಳಕ್ಕೆ ಹೊಡೆದು, ಆಕೆಯ ಮೈಮೇಲಿನ ಸೀರೆ ಹಿಡಿದು ರಸ್ತೆಯಲ್ಲಿ ಎಳೆದಾಡಿ ಸಾರ್ವಜನಿಕವಾಗಿ ಆಕೆಗೆ ಮಾನಭಂಗಪಡಿಸಿ ನಂತರ ಆರೋಪಿತರೆಲ್ಲರೂ ಕೂಡಿ ಆಕೆಗೆ "ನಿನ್ನ ಮಗಳಿಗೆ ಹೇಳು, ಮರ್ಯಾದೆಯಿಂದ ನಮ್ಮತ್ತರ ಬಂದು ತಪ್ಪಾಯಿತು ಅಂತಾ ಕೇಳಿಕೊಂಡರೇ ಸರಿ ಇಲ್ಲವಾದರೇ ವಾಪಸ್ಸು ಬಂದು ನಿಮಗೆ ಜೀವ ಸಹಿತ ಬಿಡುವುದಿಲ್ಲವೆಂದು" ಆಕೆಗೆ ಜೀವ ಬೆದರಿಕೆ ಹಾಕಿ ಹೋಗಿರುತ್ತಾರೆ. ಈ ಬಗ್ಗೆ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂ:127/2023 ಕಲಂ: 143, 147, 148, 323, 324, 448, 354, 504, 506 ಸಹಿತ 149 ಐಪಿಸಿ ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ಪ್ರಕರಣದ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

ದಿನಾಂಕ:17.07.2023 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಶ್ರೀ ಪ್ರಶಾಂತ್ ರಫ್ತಾನ್ (ಮಂಡಲ್), ಸುನೀಲ್ ಮೇತ್ರಿ ಬಂಗಾಲಿ ಸಮಾಜದ ಮುಖಂಡರು ರವರ ನೇತೃತ್ವದಲ್ಲಿ ಆರ್.ಎಸ್.ಎಸ್, ಭಜರಂಗದಳ ಇತರೆ ಸುಮಾರು 400-500 ಜನರು ಸೇರಿ ಸಿಂಧನೂರು ತಹಶೀಲ್ ಕಾರ್ಯಾಲಯಕ್ಕೆ ಬಂದು ಆರೋಪಿತರನ್ನು ಕೂಡಲೇ ದಸ್ತಗಿರಿ ಮಾಡಿ, ದುಷ್ಕೃತ್ಯವೆಸಗಿದವರ ಮೇಲೆ ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಬೇಕು, ಬಂಗಾಲಿ ಸಮಾಜಕ್ಕೆ ನ್ಯಾಯ, ರಕ್ಷಣೆ ಒದಗಿಸಿಕೊಡಬೇಕೆಂದು ಒತ್ತಾಯಿಸಿ ಪ್ರತಿಭಟನೆ ಮಾಡಿ, ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಅದೇ ದಿನ ಮಧ್ಯಾಹ್ನ 1.00 ಗಂಟೆ ಸುಮಾರಿಗೆ ಸಿಂಧನೂರು ನಗರದ ಪ್ರವಾಸಿ ಮಂದಿರದಲ್ಲಿ ಶ್ರೀ ಕೆ.ವಿರುಪಾಕ್ಷಪ್ಪ, ಮಾಜಿ ಸಂಸದರು, ಕೊಪ್ಪಳ, ಶ್ರೀ ಕೊಲ್ಲಾ ಶೇಷಗಿರಿ ರಾವ್ ಮಾಜಿ ಅಧ್ಯಕ್ಷರು ಕಾಡಾ, ಶ್ರೀ ಪಂಪನಗೌಡ ಬಾದರ್ಲಿ, ಮಾಜಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಶ್ರೀ ಬಸವರಾಜ ನಾಡಗೌಡ, ಜೆಡಿಎಸ್ ಮುಖಂಡರು ಇತರೆ ವಿವಿಧ ರಾಜಕೀಯ ಪಕ್ಷದ ಮುಖಂಡರು ಸೇರಿ ಈಗಾಗಲೇ ಸಿಂಧನೂರು ಪೊಲೀಸರು ತಪ್ಪಿಸ್ಥರ ಮೇಲೆ ಕಾನೂನು ಕ್ರಮ ಕೈಗೊಂಡು, ನೊಂದವರಿಗೆ ಕ್ಯಾಂಪಿನಲ್ಲಿ ಸೂಕ್ತ ರಕ್ಷಣೆ ನೀಡಿದ್ದು, ಪೊಲೀಸರ ಕಾರ್ಯ ಶ್ಲಾಘನೀಯ ಎಂದು ಮುಂತಾಗಿ ಹೇಳಿಕೆಗಳನ್ನು ಕೊಟ್ಟಿರುತ್ತಾರೆ.

ನಂತರ ಸಂಜೆ 6.00 ಗಂಟೆಗೆ ಶ್ಯಾಮೀದ್ ತಂದೆ ಲಾಲಸಾಬ್, 21 ವರ್ಷ, ಮುಸ್ಲಿಂ, ಮೇಸನ್ ಕೆಲಸ, ಸಾ:ನೂರಾನಿ ಮಸೀದಿ ಹತ್ತಿರ, ಮಹಿಬೂಬ ಕಾಲೋನಿ, ಸಿಂಧನೂರು ರವರು ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಗೆ ಹಾಜರಾಗಿ ದೂರು ಸಲ್ಲಿಸಿದ್ದು, ಆರೋಪಿತನು Alone girl ಎಂದು ತನ್ನ ಇನ್‌ಸ್ಟಾಗ್ರಾಂ ಆಪ್‌ನಲ್ಲಿ ಗ್ರೂಪ್ ಕ್ರಿಯೇಟ್ ಮಾಡಿದ್ದು, ಅದರಲ್ಲಿ ಕೆಲವು ಹುಡುಗರು ಮತ್ತು ಹುಡುಗಿಯರನ್ನು ಸಹ ಆ್ಯಡ್ ಮಾಡಿರುತ್ತಾನೆ. ಅದರಲ್ಲಿ ಎಲ್ಲರೂ ಆಗಾಗ ಚಾಟ್ ಮಾಡುತ್ತಿದ್ದು, ಅದರಂತೆ ಪಿರ್ಯಾದಿ ಸ್ನೇಹಿತನಾದ ತೌಶೀಪ್ ಬೆಂಗಳೂರು ಎನ್ನುವಾತನು ಸಹ ಆ ಗ್ರೂಪ್‌ನಲ್ಲಿದ್ದುದರಿಂದ ದಿನಾಂಕ: 11.07.2023 ರಂದು ದಿನ ಗ್ರೂಪ್‌ನಲ್ಲಿರುವವರನ್ನು ಮಾತನಾಡಿಸಲೆಂದು ಕಾಮಿಡಿ ಮಾಡಲೆಂದು ಗ್ರೂಪ್ ವಿಡಿಯೋ ಕಾಲ್ ಮಾಡಿದ್ದು, ಆಗ ಗ್ರೂಫ್‌ನಲ್ಲಿರುವವರು ಏಕೆ ವಿಡಿಯೋ ಕಾಲ್ ಮಾಡುತ್ತೀಯಾ ಎಂದು ಅವಾಚ್ಯವಾಗಿ ಮೆಸೇಜ್ ಮಾಡಿದರು. ಆಗ Priya ಎಂಬ ಹೆಸರಿನ ಐಡಿಯಿಂದ ಗ್ರೂಫ್ ವಿಡಿಯೋ ಕಾಲ್ ಮಾಡಬೇಡ ಎಂದು ಅವಾಚ್ಯವಾಗಿ ಬೈದರು. ಆಗ ನನಗೆ ಸಿಟ್ಟು ಬಂದು ನಿಮ್ಮ ಅಪ್ಪ ಅಂತಾ ಅಂದೆನು. ಆಗ Priya ಎಂಬ ಹೆಸರಿನ ಐಡಿಯಿಂದ ಮತ್ತು ಇತರರ ಐಡಿಯಿಂದ ".... ಮಗನೆ ಸರಿಯಾಗಿ ಮಾತನಾಡು ಇಲ್ಲವೆಂದರೆ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು" ಮೆಸೇಜ್ ಚಾಟ್ ಮಾಡುತ್ತಾ ನನಗೆ ಗ್ರೂಪ್ ನಲ್ಲಿ ಮುಸ್ಲಿಂ ಧರ್ಮದ ದೇವರಿಗೆ ಅವಮಾನ ಮಾಡಿದ್ದು ಆಗ ನಾನು Alone girl ಗ್ರೂಪ್ ಅಡ್ಮಿನ್ ಆದ ಅರ್ಜುನ

ಮಂಡಲ್ ಈತನಿಗೆ ಇನ್ಸ್‌ಸ್ಟಾಗ್ರಾಂ ಆಡಿಯೋ ಕಾಲ್ ಮಾಡಿ Priya ಎಂಬ ಹೆಸರಿನವರು ಯಾರು, ಅವರ ನಂಬರ ಕೊಡು ಅಂತಾ ಕೇಳಿದಾಗ, ಅವನು ನಾನೇ ಆ ಹೆಸರಿನ ಐಡಿ ಕ್ರಿಯೇಟ್ ಮಾಡಿಬೈದಿರುತ್ತೇನೆ, ಏನು ಮಾಡುತ್ತೀ ಮಾಡಿಕೋ ನಮ್ಮ ಕ್ಯಾಂಪಿಗೆ ಬಾನಿನ್ನ ಜೀವ ಸಹಿತ ಉಳಿಸುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾನೆಂದು ಫಿರ್ಯಾದಿದಾರನಿಗೆ ತಿಳಿಸಿದ್ದು, ಕಾರಣ ಆರೋಪಿ ಅರ್ಜುನ್ ಮಂಡಲ್ ಈತನು ತೌಶೀಫ್ ಸಾ:ಬೆಂಗಳೂರು ಈತನಿಗೆ ಇನ್‌ಸ್ಟಾಗ್ರಾಂ ಆಪ್‌ನಲ್ಲಿ Alone girl ಎಂದು ಗ್ರೂಪ್ ಮಾಡಿ ಅದರಲ್ಲಿ ತನ್ನದೇ Priya ಅಂತಾ ಹೆಸರಿನ ಇನ್ನೊಂದು ಐಡಿ ಕ್ರಿಯೇಟ್ ಮಾಡಿ ಮುಸ್ಲಿಂ ಧರ್ಮದ ದೇವರಿಗೆ ಅವಹೇಳನ ಮಾಡಿ ನಮ್ಮ ಧರ್ಮದ ಧಾರ್ಮಿಕ ಭಾವನೆಗಳಿಗೆ ಧಕ್ಕೆಯನ್ನುಂಟು ಮಾಡಿ ಅವಾಚ್ಯವಾಗಿ ಬೈದಾಡಿ ಜೀವ ಬೆದರಿಕೆ ಹಾಕಿದ ಅರ್ಜುನ್ ಮಂಡಲ್ ಮತ್ತು ಅವಾಚ್ಯವಾಗಿ ಬೈದು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ನೀಡಿದ ದೂರಿನ ಮೇರೆಗೆ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂ:129/2023 ಕಲಂ:295(ಎ), 504, 506 ಐಪಿಸಿ ಮತ್ತು ಕಲಂ: 67 The Information Technology Act-2000 ಅಡಿಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಕೈಗೊಳ್ಳಲಾಗಿರುತ್ತದೆ.

ಮೇಲ್ಕಂಡ 2 ಪ್ರಕರಣಗಳ ಪೈಕಿ (1) ಮೊಕದ್ದಮೆ ಸಂ:127/2023 ಕಲಂ: 143, 147, 148, 323, 324, 448, 354, 504, 506 ಸಹಿತ 149 ಐಪಿಸಿ ಪ್ರಕರಣದಲ್ಲಿ ಆರೋಪಿತರಾದ 1) ಅಕ್ಷರ್ ತಂದೆ ಆಶೀಮಸಾಬ್, 2) ಶ್ಯಾಮೀದ್ ತಂದೆ ಲಾಲ್ ಸಾಬ ರವರನ್ನು ದಿನಾಂಕ:17-07-2023 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಅಪ್ರಾಪ್ತ ವಯಸ್ಕರಾದ 3) ತಾಜುದ್ದೀನ್ ತಂದೆ ಹುಸೇನಭಾಷ, 4) ಸಮೀರ್ ತಂದೆ ಶೇಖ್ ಮೋಹಿನುದ್ದೀನ್ ರವರಿಗೆ ಕಲಂ:41(ಎ) ಸಿಆರ್‌ಪಿಸಿ ಅಡಿಯಲ್ಲಿ ನೋಟೀಸ್ ಜಾರಿ ಮಾಡಲಾಗಿರುತ್ತದೆ. ಆರೋಪಿತರು ಆರ್.ಹೆಚ್.ಕ್ಯಾಂಪ್ ನಂ:2ಕ್ಕೆ ತೆಗೆದುಕೊಂಡು ಬಂದು ಬಿಟ್ಟು ಹೋಗಿದ್ದ ಒಟ್ಟು 6 ಮೋಟಾರ ಸೈಕಲ್‌ಗಳನ್ನು ಸ್ಥಳದಲ್ಲಿ ಜಪ್ತಿಪಡಿಸಿಕೊಂಡಿರುತ್ತದೆ.

ಅಲ್ಲದೇ ಮೊಕದ್ದಮೆ ಸಂಖ್ಯೆ:129/2023 ಕಲಂ:295(ಎ), 504, 506 ಐಪಿಸಿ ಮತ್ತು ಕಲಂ:67 The Information Technology Act-2000 ರ ಪ್ರಕರಣದಲ್ಲಿ ಆರೋಪಿತನಾದ ಅರ್ಜುನ್ ಮಂಡಲ್ ತಂದೆ ಮಾಧವ್ ಮಂಡಲ್, 19 ವರ್ಷ, ನಮಶೂದ್ರ, ಡಿಜೆ ಹಚ್ಚುವ ಕೆಲಸ, ಸಾ:ಆರ್.ಹೆಚ್.ಕ್ಯಾಂಪ್ ನಂ:2 ಈತನನ್ನು ದಿನಾಂಕ:17.07.2023 ರಂದು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಈ ಮೇಲ್ಕಂಡ 2 ಪ್ರಕರಣದಲ್ಲಿನ ಆರೋಪಿತರನ್ನು ನ್ಯಾಯಾಧೀಶರು ದಿನಾಂಕ:31.07.2023 ರವರಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತಾರೆ.

ಈ ಘಟನೆಯ ಬಗ್ಗೆ ಮಾಹಿತಿ ತಿಳಿದು ಬಂದ ಕೂಡಲೇ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರು ಆರ್.ಹೆಚ್ ಕ್ಯಾಂಪಿಗೆ ಭೇಟಿ ನೀಡಿ, ಮಾಹಿತಿ ನೀಡಿದ ತಕ್ಷಣ ಘಟನಾ ಸ್ಥಳವಾದ ಆರ್‌ಹೆಚ್ ಕ್ಯಾಂಪಿಗೆ ಭೇಟಿ ನೀಡಿ, ಕ್ಯಾಂಪಿನಲ್ಲಿ ಸೇರಿದ ಜನರನ್ನು ಚದುರಿಸಿ, ಕ್ಯಾಂಪ್‌ನ ಹಿರಿಯ ಮುಖಂಡರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪಡೆದುಕೊಂಡು ಸಭೆಯನ್ನು ಜರುಗಿಸಲಾಗಿರುತ್ತದೆ.

ದಿನಾಂಕ:18-07-2023 ರಂದು ಮೊಕದ್ದಮೆ ಸಂ:127/2023ರ ಪ್ರಕರಣಕ್ಕೆ ಸಂಬಂಧಿಸಿದಂತೆ 3 ಜನ ಕಾನೂನು ಸಂಘರ್ಷಕ್ಕೊಳಗಾದ ಬಾಲಕರನ್ನು ವಶಕ್ಕೆ ತೆಗೆದುಕೊಂಡು ಕಲಂ:41(ಎ) ಸಿ.ಆರ್.ಪಿ.ಸಿ ಅಡಿಯಲ್ಲಿ ನೋಟೀಸ್ ಜಾರಿ ಮಾಡಿ, ಪುನಃ ಇಂತಹ ಕೃತ್ಯಗಳಲ್ಲಿ ಭಾಗಿಯಾಗದಂತೆ ಇರಲು ಸೂಕ್ತ ತಿಳುವಳಿಕೆಗಳನ್ನು ಕೊಟ್ಟು ಕಳುಹಿಸಲಾಗಿರುತ್ತದೆ.

ದಿನಾಂಕ:18-07-2023 ರಂದು ಸಂಜೆ ವೇಳೆಯಲ್ಲಿ ಆರ್.ಹೆಚ್.ಕ್ಯಾಂಪ್ ನಂ:2ರ ಬಂಗಾಲಿ ಜನಾಂಗದ ಮುಖಂಡರುಗಳನ್ನು ಸಿಂಧನೂರು ಗ್ರಾಮೀಣ ಠಾಣೆಗೆ ಕರೆಯಿಸಿಕೊಂಡು ಮುಂದಿನ ದಿನಗಳಲ್ಲಿ ಯಾರೂ ಸಾಮಾಜಿಕ ಜಾಲತಾಣಗಳಲ್ಲಿ ಅನ್ಯ ಜಾತಿ, ಧರ್ಮಗಳಿಗೆ ಸಂಬಂಧಿಸಿದಂತೆ ಇಲ್ಲಸಲ್ಲದ ಟೀಕೆಗಳನ್ನು

ಮಾಡದಂತೆ ಕ್ಯಾಂಪಿನ ಯುವಕರಿಗೆ ಸೂಕ್ತ ತಿಳುವಳಿಕೆಗಳನ್ನು ಕೊಡುವಂತೆ ಹಾಗೂ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಪ್ರಕರಣ ದಾಖಲಾಗಿದ್ದು, ಕಾನೂನು ರೀತಿ ತನಿಖೆ ಕೈಗೊಂಡು ಸೂಕ್ತ ಕ್ರಮ ಜರುಗಿಸಲಾಗುವುದು, ಶಾಂತ ರೀತಿಯಿಂದ ಕ್ಯಾಂಪಿನಲ್ಲಿರುವಂತೆ ಕೋರಲಾಗಿರುತ್ತದೆ.

ನಂತರ ಅದೇ ದಿನ ರಾತ್ರಿ ಸಿಂಧನೂರು ನಗರ ಪೊಲೀಸ್ ಠಾಣೆಯಲ್ಲಿ ಸಿಂಧನೂರಿನ ಮುಸ್ಲಿಂ ಸಮಾಜದ ಮುಖಂಡರುಗಳೊಂದಿಗೆ, ಈಗಾಗಲೇ ವರದಿಯಾಗಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ, ಯಾವುದೇ ಘಟನೆಯು ಮರುಕಳಿಸದಂತೆ ಮುಂದಿನ ದಿನಗಳಲ್ಲಿ ಸಮಾಜದ ಹುಡುಗರು, ಮತೀಯ ಗಲಭೆಗಳಿಗೆ ಅವಕಾಶ ಕೊಡದೇ, ಶಾಂತರೀತಿಯಿಂದ ಇರುವಂತೆ ಸೂಚಿಸಲಾಗಿರುತ್ತದೆ.

ದಿನಾಂಕ:19-07-2023 ರಂದು ಬೆಳಿಗ್ಗೆ ಡಿಎಸ್‌ಪಿ, ಸಿಂಧನೂರು ಮತ್ತು ಪಿಐ, ಸಿಂಧನೂರು ನಗರ ಠಾಣೆ, ಸಿಪಿಐ, ಸಿಂಧನೂರು ಗ್ರಾಮೀಣ ವೃತ್ತ ರವರು ಸೇರಿ ಹಿಂದೂ, ಮುಸ್ಲಿಂ ಸಮಾಜದ ಮುಖಂಡರುಗಳನ್ನು ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳೊಂದಿಗೆ ಸಿಂಧನೂರು ನಗರದ ಸರ್ಕ್ಯೂಟ್ ಹೌಸ್ ನಲ್ಲಿ **ಶಾಂತಿ ಸಭೆಯನ್ನು ಏರ್ಪಡಿಸಿ,** ಮುಂದಿನ ದಿನಗಳಲ್ಲಿ ಯಾರೂ ಸಾಮಾಜಿಕ ಜಾಲತಾಣಗಳಲ್ಲಿ ಮತೀಯ ವಿಷಯಗಳಿಗೆ ಸಂಬಂಧಿಸಿದಂತೆ ಯಾವುದೇ ಟೀಕೆಗಳನ್ನು ಮಾಡದಂತೆ ನೋಡಿಕೊಳ್ಳಲು ಹಾಗೂ ಸಮಾಜದ ಯುವಕರಿಗೆ ಬುದ್ಧಿ ಮಾತು ಹೇಳುವಂತೆ ಹಾಗೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಪುನಃ ಒಬ್ಬರಿಗೊಬ್ಬರು ವೈಮನಸ್ಸು ಮಾಡಿಕೊಳ್ಳದೇ ಶಾಂತತೆಯನ್ನು ಕಾಪಾಡಿಕೊಳ್ಳಲು ಸೂಚಿಸಿರುತ್ತದೆ.

ದಿನಾಂಕ:20.07.2023 ರಂದು ಬೆಳಗಿನ ಜಾವ ಪ್ರಕರಣಗಳಿಗೆ ಸಂಬಂಧಸಿದಂತೆ 01) ಶ್ರೀ ಹರ್ಷದ್ ತಂದೆ ಸೈಯದ್ ಭಾಷಾ, ವಯಸ್ಸು: 19ವರ್ಷ, ಉದ್ಯೋಗ: ಎಲೆಕ್ಟ್ರಿಕ್ ವರ್ಕ್ R/o ಎಲುರಗಿ ಕ್ಯಾಂಪ್, 02) ಯಾಸಿನ್ ತಂದೆ ಅಬ್ದುಲ್ ರೆಹಮಾನ್ ವಯಸ್ಸು: 19ವರ್ಷ, ಉದ್ಯೋಗ: ಕೂಲಿ, R/o ಕೋಟೆ ಏರಿಯಾ ಸಿಂಧನೂರು, 03) ಹಸ್ಸನ್ ತಂದೆ. ಹೋಹಿನ್ ಪಾಷ ವಯಸ್ಸು: 21ವರ್ಷ, ಉದ್ಯೋಗ: ಮೆಕ್ಯಾನಿಕ್, R/o ಬಡಿಬೇಸ್ ಸಿಂಧನೂರು ಹಾಗೂ 2 ಜನ ಕಾನೂನು ಸಂಘರ್ಷಕ್ಕೊಳಗಾದ ಬಾಲಕರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ.

ಪ್ರಕರಣಕ್ಕೆ ಸಂಬಂದಿಸಿದಂತೆ ಆರೋಪಿತರನ್ನು ದಸ್ತಗಿರಿ ಮಾಡಲು ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ. ಸದರಿ ಗ್ರಾಮದಲ್ಲಿನ ಆಗುಹೋಗುಗಳ ಬಗ್ಗೆ ನಿಗಾವಹಿಸಿ ಮಾಹಿತಿ ಸಂಗ್ರಹಿಸಲು ಗುಪ್ತ ಮಾಹಿತಿ ಸಿಬ್ಬಂದಿಯವರನ್ನು ನಿಯೋಜನೆ ಮಾಡಿರುತ್ತದೆ. ಇದುವರೆಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 12 ಜನರನ್ನು ವಶಕ್ಕೆ ಪಡೆದಿದ್ದು, ಆ ಪೈಕಿ 7 ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ. ಹಾಗೂ ಉಳಿದ 5 ಜನ ಕಾನೂನು ಸಂಘರ್ಷಕ್ಕೊಳಗಾದ ಬಾಲಕರನ್ನು (18 ವರ್ಷಕ್ಕಿಂತ ಕಡಿಮೆ ವಯಸ್ಸಿನ) ವಶಕ್ಕೆ ಪಡೆದು ನಿಯಮಾನುಸಾರ ಕ್ರಮ ಜರುಗಿಸಲಾಗಿದೆ. ಪ್ರಸ್ತುತ ಆರ್.ಹೆಚ್.ಕ್ಯಾಂಪ್ ನಂ:02ರಲ್ಲಿ ಪರಿಸ್ಥಿತಿ ಶಾಂತವಿದ್ದು, 1 ಡಿಎಸ್‌ಪಿ, 3 ಪಿಐ/ಸಿಪಿಐ, 6 ಜನ ಪಿಎಸ್‌ಐ ಹಾಗೂ 40 ಜನ ಹೆಚ್‌ಸಿ/ಪಿಸಿ ಸಿಬ್ಬಂದಿಯವರನ್ನು ಹಾಗೂ 2 ಐಆರ್‌ಬಿ ಮತ್ತು 1 ಡಿಎಆರ್ ತುಕಡಿಗಳನ್ನು ಬಂದೋಬಸ್ತ್ ಕರ್ತವ್ಯಕ್ಕೆ ನೇಮಕ ಮಾಡಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

(ಡಾ: ಜಿ.ಪರಮೇಶ್ವರ)
ಗೃಹಸಚಿವರು

ಹೆಚ್ ಡಿ 85 ಪಿಸಿಇ 2023